ದಿನಾಂಕಃ 01-09-2023 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ.ಎಸ್.ಎನ್ .ಎನ್.ಕೆ. ವಕೀಲರಿಂದಃ**

ನನ್ನ ಪ್ರಕಾರ ದಾವಾ ಅನುಸೂಚಿ ಸ್ವತ್ತನ್ನು ಖರೀದಿ ಮಾಡಲು ಮೃತ ಕಾಶ್ಮೀರಿ ಡಿ' ಸೋಜಾರವರ ಬಳಿ ನನ್ನ ತಂದೆಯವರು ಕರಾರು ಮಾಡಿರುತ್ತಾರೆ. ಸದರಿ ಕರಾರಿನ ಆಧಾರದ ಮೇಲೆ ನನ್ನ ತಂದೆಯವರು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿಯಂತೆ ನಮ್ಮ ತಂದೆಯವರಿಗೆ ದಾವಾ ಸ್ವತ್ತಿನ ಮೇಲೆ ಮಾಲೀಕತ್ವದ ಹಕ್ಕು ಬಂದಿರುತ್ತದೆ. ಸಾಕ್ಷಿಗೆ ನಿ.ಡಿ.12(ಬಿ) ಮತ್ತು ನಿ.ಪಿ.3 ರಲ್ಲಿರುವ ಸಹಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು 2 ಸಹಿಗಳು ಇಂಗ್ಲೀಷ್ ನಲ್ಲಿ ಇರುತ್ತದೆ. ಆದರೆ ಎಂ ಎಂಬುವ ಅಕ್ಷರ ಬಿಡಲಾಗಿದೆ ಎಂದು ಹೇಳುತ್ತಾರೆ. ನಿ.ಪಿ.4 ರಲ್ಲಿರುವ ಸಹಿ ಮತ್ತು ವಕಾಲತ್ ನಲ್ಲಿರುವ ವಾದಿಯ ಸಹಿ ಒಂದೇ ರೀತಿ ಇರುತ್ತದೆ ಎಂದರೆ ಸರಿ ಎಂದು ಒಪ್ಪಿರುತ್ತಾರೆ. ಹಾಗಾಗಿ ಸದರಿ ವಕಾಲತ್ ನಲ್ಲಿರುವ ವಾದಿಯ ಸಹಿಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಡಿ.8(ಎ) ಮತ್ತು ನಿ.ಪಿ.3 ರಲ್ಲಿರುವ ಸಹಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು 2 ಸಹಿಗಳು ಇಂಗ್ಲೀಷ್ ನಲ್ಲಿ ಇರುತ್ತದೆ. ಆದರೆ ಎಂ ಎಂಬುವ ಅಕ್ಷರ ಬಿಡಲಾಗಿದೆ ಎಂದು ಹೇಳುತ್ತಾರೆ. ನಿ.ಪಿ.4 ಮತ್ತು ನಿ.ಡಿ. 8(ಎ) ಮತ್ತು ನಿ.ಡಿ..12(ಎ) ರಲ್ಲಿರುವ ಸಹಿಗಳನ್ನು ತುಲನೆ ಮಾಡಲು ಕೈಬರಹ ತಜ್ಞರಿಗೆ ಕಳುಹಿಸಲು ನನ್ನ ಆಕ್ಷೇಪ ಇರುತ್ತದೆ. ಕರಾರಿಗೆ ಇಬ್ಬರು ಸಾಕ್ಷಿಗಳು ಹಾಜರಾಗಿ ಸಹಿ ಮಾಡಿರುವುದರಿಂದ ನನ್ನ ಆಕ್ಷೇಪ ಇರುತ್ತದೆ. ನಿ.ಡಿ.12 ರ ಕರಾರಿಗೆ ಸಾಕ್ಷಿದಾರರಾಗಿ ನಾರಾಯಣ ಗೌಡ ಮತ್ತು ಶಿವಪ್ಪ ಗೌಡ ಎಂಬುವವರು ಸಹಿ ಮಾಡಿರುತ್ತಾರೆ. ನಿ.ಡಿ.8 ಸಾಮಾನ್ಯ ಅಧಿಕಾರ ಪತ್ರಕ್ಕೆ ಸಹ ಸಾಕ್ಷಿದಾರರಾಗಿ ನಾರಾಯಣ ಗೌಡ ಮತ್ತು ಶಿವಪ್ಪ ಗೌಡ ಎಂಬುವವರು ಸಹಿ ಮಾಡಿರುತ್ತಾರೆ ಮುಂದುವರಿದು ಸಾಕ್ಷಿಯು ನಾರಾಯಣ ಭಟ್ ವಕೀಲರು ಸಹ ಸಹಿ ಹಾಕಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆಯವರು ಮೃತ ಕಾಶ್ಮೀರಿ ಡಿ' ಸೋಜಾರವರೊಂದಿಗೆ ಯಾವುದೇ ಆಸ್ತಿಗೆ ಸಂಬಂಧಿಸಿದಂತೆ ಮಾತುಕತೆ ಆಗಿರುವುದನ್ನು ನೋಡಿಲ್ಲ ಎಂದರೆ ಸರಿ .

ದಿನಾಂಕ 11-2-2008 ರಂದು ನನ್ನ ತಂದೆಯವರು ನನಗೆ ನೋಂದಾಯಿತ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ. ನಾನಾಗಲೀ ಅಥವಾ ನನ್ನ ತಂದೆಯವರಾಗಲೀ ಪ್ರತಫಲ ಹಣ ಕೊಟ್ಟ ಮಟ್ಟಿಗೆ ರಶೀದಿ ಅಥವಾ ದಾಖಲೆ ಇರುವುದಿಲ್ಲ. ಅದರೆ ನಗದನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಮೃತ ಕಾಶ್ಮೀರಿ ಡಿ' ಸೋಜಾರವರರಿಗೆ ಯಾವತ್ತೂ ಹಣ ಕೊಟ್ಟಿದ್ದಿಲ್ಲ ಎಂದರೆ ಸರಿ . ಮೃತ ಕಾಶ್ಮೀರಿ ಡಿ' ಸೋಜಾ ಮತ್ತು ನನ್ನ ನಡುವೆ ಆಸ್ತಿಯ ಬಗ್ಗೆ ಯಾವುದೇ ದಾಖಲೆ ವ್ಯವಹಾರ ಆಗಿದಿಲ್ಲ ಎಂದರೆ ಸರಿ. ನಿ.ಡಿ.8(ಎ)ಮತ್ತು ನಿ.ಡಿ.12(ಬಿ) ಸಹಿ ಮೃತ ಕಾಶ್ಮೀರಿ ಡಿ' ಸೋಜಾರವರು ಹಾಕಿರುವ ಸಹಿ ಅಲ್ಲ ಎಂದರೆ ಸರಿಯಲ್ಲ. ಮೃತ ಕಾಶ್ಮೀರಿ ಡಿ' ಸೋಜಾರವರ ಬದಲಿಗೆ ಯಾರೋ ಇನ್ನೊಬ್ಬರನ್ನು ಕರೆಸಿ ನಿ.ಡಿ.8 ಮತ್ತು 12 ಕ್ಕೆ ಸಹಿ ಪಡೆದು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ತಿಳಿದ ಮಟ್ಟಿಗೆ ಮೃತ ಕಾಶ್ಮೀರಿ ಡಿ' ಸೋಜಾರವರಿಂದ ನನ್ನ ತಂದೆಯವರು ಯಾವುದೇ ರಶೀದಿಯನ್ನು ಪಡೆದುಕೊಂಡಿಲ್ಲ ಎಂದರೆ ಗೊತ್ತಿಲ್ಲ.

ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯೇ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ನಿ.ಪಿ.2 ಕ್ರಯಪತ್ರ ಆಗಿರುವ ಬಗ್ಗೆ ನನ್ನ ತಂದೆ ವಾದಿಯವರಿಗೆ ನೋಟೀಸು ಕೊಟ್ಟಿರುವ ಬಗ್ಗೆ ಗೊತ್ತಿಲ್ಲ. .ನಿ.ಡಿ.12 ರ ಮಟ್ಟಿಗೆ ಮೃತ ಕಾಶ್ಮೀರಿ ಡಿ' ಸೋಜಾ ರವರಿಗೆ ನನ್ನ ತಂದೆಯವರು ನೋಟೀಸು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿ.ಡಿ.8 ಮತ್ತು 12 ನ್ನು ಒಂದೇ ದಿನ ಮಾಡಿಕೊಳ್ಳಲು ಏನು ಕಾರಣ ಎಂದು ನನಗೆ ಗೊತ್ತಿಲ್ಲ. ನಿ.ಪಿ.2 ರಂತೆ ಕ್ರಯಪತ್ರ ಮಾಡಿಕೊಳ್ಳಲು ಡಿ.ಸಿ. ಯವರಿಂದ ಅನುಮತಿ ಪಡೆದ ಬಗ್ಗೆ ಗೊತ್ತಿಲ್ಲ. ಅದೇರೀತಿ ತಹಶೀಲ್ದಾರ್ ರವರಿಗೆ ಅನುಮತಿ ಪಡೆದ ಬಗ್ಗೆ ಗೊತ್ತಿಲ್ಲ. 2008 ರ ಕ್ರಯಪತ್ರದಬಗ್ಗೆ ನನ್ನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ . ನಿ.ಪಿ.2 ಅಥವಾ ನಿ.ಡಿ.5 ಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ನಾನು ತಯಾರು ಮಾಡಿದವರಿಗೆ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ತಂದೆಯವರು ನೀಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಪ್ರತಿಪಾದಿಸುವ ನಿ.ಡಿ.5, ನಿ.ಡಿ.8 ಮತ್ತು ನಿ.ಡಿ.12

ರಚಿಸಿದವರು ನನ್ನ ತಂದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಸದರಿ ಮೂರು ದಾಖಲೆಗೆ ನನ್ನ ತಂದೆಯವರೇ ಮಾಹಿತಿ ನೀಡಿರುತ್ತಾರೆ. ನಾನು ಈಗ ಮೇಲೆ ಹೇಳಿದ 3 ದಾಖಲೆಗಳಿಗೂ ನನ್ನ ತಂದೆಯವರು ಮಾಹಿತಿ ನೀಡಿದ ತಯಾರಿಸಿದ್ದು ಎಂದರೆ ಸರಿಯಲ್ಲ. ಸದರಿ 3 ದಾಖಲೆಗಳನ್ನು ಮೋಹನ್ ಭಟ್ ವಕೀಲರು ತಯಾರು ಮಾಡಿಸಿರುತ್ತಾರೆ. ಮೋಹನ್ ಭಟ್ ವಕೀಲರ ಸಮಕ್ಷಮ ನಾನು ಯಾವುದೇ ಹಣವನ್ನು ನೀಡಿಲ್ಲ, ನನ್ನ ತಂದೆಯವರು ನೀಡಿದ್ದಾರೆ. ನನ್ನ ತಂದೆಯವರು ಮೋಹನ್ ಭಟ್ ವಕೀಲರಿಗೆ ಹಣವನ್ನು ನೀಡಿರುತ್ತಾರೆ. ನಿ.ಡಿ.5 ತಯಾರಿಸಿದ ದಿನವೇ ಹಣವನ್ನು ನೀಡಿರುತ್ತಾರೆ. ಸದರಿ ದಿನ ನನ್ನ ತಂದೆಯವರು ಮೋಹನ್ ಭಟ್ ವಕೀಲರಿಗೆ ಎಷ್ಟು ಹಣ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೋಹನ್ ಭಟ್ ವಕೀಲರಿಗೆ ನೋಂದಾವಣಿ ಖರ್ಚಿಗಾಗಿ ನೀಡಿರುತ್ತಾರೆ. ನಿ.ಡಿ.5 ನ್ನು ತಯಾರಿಸುವ ದಿನ ಮೋಹನ್ ಭಟ್ ವಕೀಲರಿಗೆ ನೋಂದಾವಣಿ ಖರ್ಚು ಮತ್ತು ದಾಸ್ತಾವೇಜು ಖರ್ಚನ್ನು ಹೊರತುಪಡಿಸಿ ನಾನಾಗಲೀ ನನ್ನ ತಂದೆಯವರಾಗಲೀ ಇತರೆ ಯಾರಿಗೂ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿ .

ಮೃತ ಕಾಶ್ಮೀರಿ ಡಿ' ಸೋಜಾರವರ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿ.ಡಿ.5 , ನಿ.ಡಿ.8 ಮತ್ತು ನಿ.ಡಿ.12 ರ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.5 ರ ದಾಖಲೆಗೆ ಯಾರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ನಿ.ಡಿ.5 ರ ದಾಖಲೆಗೆ ಸಾಕ್ಷಿಯಾಗಿ ಸಹಿ ಹಾಕಿದವರನ್ನು ಮತ್ತು ದಾಖಲೆ ತಯಾರಿಸಿದವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿ.ಡಿ.5 , ನಿ.ಡಿ.8 ಮತ್ತು ನಿ.ಡಿ.12 ರ ದಾಖಲೆಗಳು ವಾದಿಗೆ ಪ್ರಥಮವಾಗಿ ಯಾವಾಗ ಅದರ ಬಗ್ಗೆ ತಿಳಿದಿರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ . ನಿ.ಡಿ.5 ತಯಾರು ಮಾಡುವ ಸಂದರ್ಬದಲ್ಲಿ ಮೃತ ಕಾಶ್ಮೀರಿ ಡಿ' ಸೋಜಾರವರು ಮೋಹನ್ ಭಟ್ ವಕೀಲರ ಕಚೇರಿಗೆ ಬಂದಿಲ್ಲ ಎಂದರೆ ಸರಿ . ಸದರಿ ನಿ.ಡಿ.5 ತಯಾರು ಮಾಡಿದ ನಂತರ ನಾನಾಗಲೀ ಅಥವಾ ನನ್ನ ತಂದೆಯವರಾಗಲೀ ನಿ.ಡಿ.5 ರ ಪ್ರತಿಯನ್ನು

ನೀಡಿಲ್ಲ ಎಂದರೆ ಸಾಕ್ಷಿಯು ನಾನು ನೀಡಿಲ್ಲ, ನನ್ನ ತಂದೆಯವರು ನೀಡಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯವರಿಗೆ ದಾವಾ ಜಾಗದಿಂದ ಹೊರ ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಅನೇಕ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.